

ಜೀವನದಿಂದ ಮುಕ್ತಿ ಸಿಕ್ಕಿತು ಎಂದು ಕೊನೇರಿ ಬಹಳ ಹುರುಪಿನಿಂದಿದ್ದ. ಬದುಕಿನ ಬಗೆಗೆ ಎಂದೂ ಇಲ್ಲದ ನಿರೀಕ್ಷೆಯೊಂದು ಅವನೊಳಗೆ ಗರಿಬಿಚ್ಚಿತು. 'ಮಡದಿ ಬಂದ ಮೇಲೆ ಕೊನೇರಿಯ ನಸೀಬು ಬದಲಾಯ್ತು. ಬಡಕಲು ದೇಹದವನು ಅವಳ ಕೈರುಚಿಯಿಂದ ಈಗ ದುಂಡದುಂಡಗೇ ಆಗಿದ್ದಾನೆ' ಎಂದು ಈ ಮೊದಲು ಕೊನೇರಿಯನ್ನು ನೋಡಿದವರು ಆಶ್ಚರ್ಯ ವ್ಯಕ್ತಪಡಿಸುತ್ತಿದ್ದರು.

ಹೀಗೆಂದಾಗೆಲ್ಲ ಕೊನೇರಿ ಖುಷಿಯಿಂದ ಉಬ್ಬಿಹೋಗುತ್ತಿದ್ದ. ತನ್ನ ಹೆಂಡತಿಯ ಕುರಿತಾಗಿ ಬಹಳ ಹೆಮ್ಮೆಯೆನಿಸುತ್ತಿತ್ತು ಅವನಿಗೆ.

ಮದುವೆಯಾಗಿ ಮೂರು ವರುಷವಾದರೂ ನನ್ನ ಹೊಟ್ಟೆಯೊಳಗೆ ಒಂದು ಜೀವವೂ ಮೊಳಕೆಯೊಡೆಯಲಿಲ್ಲ ಎಂಬುದೊಂದು ಕೊರಗು ಗೌರಿಗೆ. 'ಆಗುತ್ತವೆ ಬಿಡು ಎಲ್ಲದಕ್ಕೂ ಕಾಲ ಕೂಡಿಬರಬೇಕು, ನೀನೇನೂ ಆ ಬಗ್ಗೆ ವ್ಯಥೆಪಡಬೇಡ' ಎಂದು ಮುಂತಾಗಿ ಹೇಳುತ್ತ ಕೊನೇರಿ ಹೆಂಡತಿಯನ್ನು ಸಮಾಧಾನಪಡಿಸಲು ನೋಡುತ್ತಿದ್ದ. ಮತ್ತೆರಡು ವರುಷ ಕಳೆದರೂ ಆ ಬಗ್ಗೆ ಯಾವ ಹೊಸ ಸುದ್ದಿಯೂ ಬರಲಿಲ್ಲ. ಈಗ ಆ ವಿಚಾರ ನಿಜಕ್ಕೂ ಕೊನೇರಿಗೆ ಬಾಧಿಸತೊಡಗಿತು. ಇದರೊಂದಿಗೆ ಕೊನೇರಿ ನಿರೀಕ್ಷಿಸದ ಸಂದರ್ಭವೊಂದು ಎದುರಾಯ್ತು.

ಹೆಂಡತಿ ಕದ್ದುಮುಚ್ಚಿ ತನ್ನ ಪ್ರಿಯಕರನೊಂದಿಗೆ ಅಡ್ಡಾಡುವುದನ್ನು ಮೊದಲ ಬಾರಿಗೆ ಕಂಡಾಗ ಕೊನೇರಿಯ ಎದೆ ಧಸ್ ಎಂದಿತ್ತು. ಯಾರೋ ಅವನ ಹೃದಯಕ್ಕೆ ಕೈಹಾಕಿ ಎಳೆದಂತಹ ನೋವು ಸಂಕಟ ಅವನಿಗೆ. ಅಂದಿನಿಂದ ಮನೆಯಲ್ಲಿ ಈ ಕುರಿತು ಗಂಡಹೆಂಡಿರ ಮಧ್ಯೆ ಆಗಾಗ ಜಗಳವಾಗತೊಡಗಿತು. ಅದರಲ್ಲಿ ಸೋಲುತ್ತಿದ್ದುದು ಮಾತ್ರ ಕೊನೇರಿ.

ಮೊದಮೊದಲು ಕೊನೇರಿಯ ಮಾತಿಗಾಗಿ, ನಗೆಗಾಗಿ, ಅವನ ಬರುವಿಕೆಗಾಗಿ ಕಾದು ಕುಳಿತಿರುತ್ತಿದ್ದ ಗೌರಿಗೆ ಕೊನೆಕೊನೆಗೆ ಗಂಡ ಬೇಡದವನಾದ, ಅವನ